ಶ್ರೀ ಬಿ.ಸಿ. ಪಾಟೀಲ್ : ಈಗ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿಯೇ ಇದ್ದಾರೆ. ಈ ಪ್ರಶ್ನೆ ಅವರ ಗಮನಕ್ಕೆ ಸಹ ಬಂದಿದೆ. ಇದರ ಬಗ್ಗೆ ಅವರ ಅಭಿಪ್ರಾಯವೇನಿದೆ ಎಂಬುದನ್ನು ಹೇಳಿದರೆ ಸೂಕ್ತವಲ್ಲವೇ? ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಬೆಳ್ತಂಗಡಿಯ ತೋಟಗಾರಿಕಾ ಇಲಾಖೆಯ ಆದಾಯ

187 (996) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿರುವ ತೋಟಗಾರಿಕೆ ಇಲಾಖೆಯ ಸ್ವಾಧೀನದಲ್ಲಿರುವ ಜಮೀನಿನ ಒಟ್ಟು ವಿಸ್ತೀರ್ಣ ಎಷ್ಟು; ಅದರಿಂದ ಬರುತ್ತಿರುವ ವಾರ್ಷಿಕ ಆದಾಯ ಎಷ್ಟು;

ಆ) ಇಲಾಖೆಯ ವ್ಯಾಪ್ತಿಯಲ್ಲಿರುವ ಜಮೀನಿನಲ್ಲಿ ಇನ್ನೂ ಹೆಚ್ಚು ಆದಾಯ ಗಳಿಸಲು ಹಾಗೂ ಸಾರ್ವಜನಿಕರಿಗೆ ಹೆಚ್ಚಿನ ಉಪಯುಕ್ತತೆಗಳನ್ನು ಒದಗಿಸಿಕೊಡಲು ಸರಕಾರ ಕ್ರಮ ಜರುಗಿಸುವುದೇ?

ಶ್ರೀ ಶಶಿಕಾಂತ ಅಕ್ಕಪ್ಪ ನಾಯ್ಕ (ತೋಟಗಾರಿಕೆ ಸಚಿವರು) :

ಅ) ಬೆಳ್ತಂಗಡಿ ತಾಲ್ಲೂಕಿನ ತೋಟಗಾರಿಕೆ ಇಲಾಖೆಯ ಸ್ವಾಧೀನದಲ್ಲಿ 314.00 ಎಕರೆ ಪ್ರದೇಶವಿದೆ. ವಿವರಗಳು ಕೆಳಕಂಡಂತಿವೆ.

1.	ಚಾರ್ಮಾಡಿ ತೋಟಗಾರಿಕೆ ಕ್ಷೇತ್ರ	:	195.20 ಎಕರೆ
2.	ಮದ್ದಡ್ಕ ತೋಟಗಾರಿಕೆ ಕ್ಷೇತ್ರ	:	115.00 ಎಕರೆ
3.	ಕಛೇರಿ ಸಸ್ಯಾಗಾರ, ಬೆಳ್ತಂಗಡಿ	:	3.20 ಎಕರೆ
	ಒಟ್ಟು	:	**314.00 ಎಕರೆ**

ಇವುಗಳಿಂದ ವಾರ್ಷಿಕ ಆದಾಯ ರೂ. 15.04 ಲಕ್ಷಗಳು ಬರುತ್ತಿದೆ (2005–06).

ಆ) ಹೌದು.

ಇಲಾಖೆಯ ವ್ಯಾಪ್ತಿಯಲ್ಲಿರುವ ಜಮೀನಿನಲ್ಲಿ ಇನ್ನೂ ಹೆಚ್ಚು ಆದಾಯ ಗಳಿಸಲು ಹಾಗೂ ಸಾರ್ವಜನಿಕರಿಗೆ ಹೆಚ್ಚಿನ ಉಪಯುಕ್ತತೆಗಳನ್ನು ಒದಗಿಸಿಕೊಡಲು ಸರ್ಕಾರವು ಈ ಕೆಳಕಂಡಂತೆ ಕ್ರಮ ಕೈಗೊಂಡಿದೆ.

1. ಸಸ್ಯೋತ್ಪಾದನೆ ಹೆಚ್ಚಿಸಲು ಅಗತ್ಯವಾದ ಮೂಲಭೂತ ಸೌಕರ್ಯಗಳಾದ ಪಾಲಿ ಹೌಸ್, ನೆರಳು ಚಪ್ಪರ, ಕೊಳವೆಬಾವಿ, ನೀರಿನ ತೊಟ್ಟಿಗಳ ನಿರ್ಮಾಣ, ಪೈಪ್‌ಲೈನ್ ಅಳವಡಿಕೆ, ಗ್ರೌಂಡ್ ನರ್ಸರಿ ಅಭಿವೃದ್ಧಿ, ಇತ್ಯಾದಿಗಳನ್ನು ನಿರ್ಮಿಸಲಾಗುತ್ತಿದೆ. ಇದರಿಂದ ಹೆಚ್ಚಿನ ಸಸ್ಯೋತ್ಪಾದನೆ ಮಾಡಿ ರೈತರ ಬೇಡಿಕೆಯನ್ನು ಪೂರೈಸಲಾಗುತ್ತಿದೆ.

2. ಕ್ಷೇತ್ರಗಳಲ್ಲಿನ ಬೆಳೆಗಳ ಉತ್ಪಾದನೆ / ಉತ್ಪಾದಕತೆ ಹೆಚ್ಚಿಸಲು ಗಿಡ/ ಮರಗಳಿಗೆ ಸಾವಯವ ಗೊಬ್ಬರ / ಎರೆಹುಳು ಗೊಬ್ಬರ ನೀಡುವುದು, ನೀರಾವರಿ ಹಾಗೂ ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಲಾಗಿದೆ.
3. ಕ್ಷೇತ್ರಗಳನ್ನು ಸಾವಯವ ಕ್ಷೇತ್ರಗಳನ್ನಾಗಿ ಮಾಡುವ ನಿಟ್ಟಿನಲ್ಲಿ ಪ್ರತಿ ಕ್ಷೇತ್ರದಲ್ಲೂ ಎರೆಹುಳು ಗೊಬ್ಬರ ಘಟಕ ನಿರ್ಮಾಣ ಮಾಡಲು ಕ್ರಮ ಜರುಗಿಸಲಾಗಿದೆ.
4. ಮದ್ದಡ್ಕ ತೋಟಗಾರಿಕೆ ಕ್ಷೇತ್ರದಲ್ಲಿ ಮಾದರಿ ನರ್ಸರಿ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ, ವಯಸ್ಸಾದ / ಅನುತ್ಪಾದಕ ಗಿಡಗಳನ್ನು ತೆಗೆದು ಹೊಸದಾಗಿ ಹೆಚ್ಚು ಇಳುವರಿ ನೀಡುವ ಹಣ್ಣಿನ ತಳಿಗಳನ್ನು ನೆಡಲು ಉದ್ದೇಶಿಸಲಾಗಿದೆ.
5. ಕ್ಷೇತ್ರಗಳಲ್ಲಿನ ಉತ್ಪಾದಕತೆ ಹೆಚ್ಚಿಸಲು ಅನುವಾಗುವಂತೆ ಪರಾಗಸ್ಪರ್ಶ ಹೆಚ್ಚಿಸಲು ಜೇನು ಸಾಕಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.
6. ಮಳೆ ನೀರಿನ ಸಂರಕ್ಷಣೆಗಾಗಿ ಮದ್ದಡ್ಕ ಕ್ಷೇತ್ರದಲ್ಲಿ ಕೃಷಿ ಹೊಂಡ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಕೆ. ಪ್ರಭಾಕರ ಬಂಗೇರ : ಮಾನ್ಯ ಅಧ್ಯಕ್ಷರೆ, ನಮ್ಮ ಬೆಳ್ತಂಗಡಿ ತಾಲ್ಲೂಕಿನ ತೋಟಗಾರಿಕೆ ಇಲಾಖೆಯಲ್ಲಿ 314.00 ಎಕರೆ ಜಮೀನಿದೆ. ಚಾರ್ಮಡಿ ತೋಟಗಾರಿಕೆ ಕ್ಷೇತ್ರ 165 ಎಕರೆ ಇದೆ. ಮದ್ದಡ್ಕ ತೋಟಗಾರಿಕೆ ಕ್ಷೇತ್ರದಲ್ಲಿ 115 ಎಕರೆ ಇದೆ ಮತ್ತು ಬೆಳ್ತಂಗಡಿ ಕಛೇರಿ ಸಸ್ಯಾಗಾರದಲ್ಲಿ 3 ಎಕರೆ 20 ಗುಂಟೆ ಜಾಗವಿದೆ. ಆದರೆ ಮದ್ದಡ್ಕದಲ್ಲಿರುವ 115 ಎಕರೆ ಜಾಗದಲ್ಲಿ ಮಾವು ಮತ್ತು ಗೇರು ಗಿಡಗಳನ್ನು ಹಾಕಿಕೊಡಬೇಕು. ತುಂಬ ಪ್ರಾಯವಾದ ಮರಗಳಿವೆ. ಅದನ್ನು ತೆಗೆದು ಹೊಸ ಮರಗಳನ್ನು ನೆಟ್ಟಾಗ ಅದರ ಆದಾಯ ಕೂಡ ಜಾಸ್ತಿಯಾಗುತ್ತದೆ. ಮದ್ದಡ್ಕ ತೋಟಗಾರಿಕೆ ಇಲಾಖೆಯ ಜಾಗದ ಬಗ್ಗೆ ನಾನು ಕಳೆದ ಸಲ ಸಹ ಪ್ರಶ್ನೆ ಕೇಳಿದ್ದೆ. ಅಲ್ಲಿ ಹೆಚ್ಚಾಗಿ ಹೈನುಗಾರಿಕೆಯನ್ನು ಮಾಡುವ ಪ್ರದೇಶವಾಗಿದೆ. ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಮದ್ದಡ್ಕ ಜಮೀನಿನಲ್ಲಿ ಹೈನುಗಾರಿಕೆಗೆ ಬೇಕಾಗುವಂಥ ಹುಲ್ಲನ್ನು ಬೆಳೆಸಿದರೆ ಅಲ್ಲಿಯ ರೈತರಿಗೆ ಅನುಕೂಲವಾಗುತ್ತದೆ. ಆ ಪರಿಸರದಲ್ಲಿ ಏಳೆಂಟು ಹಾಲು ಉತ್ಪಾದಕರ ಸಹಕಾರ ಸಂಘಗಳಿವೆ. ಸದರಿ ಜಾಗದಲ್ಲಿ ಹುಲ್ಲು ಬೆಳೆಸುವುದರಿಂದ ಆ ರೈತರಿಗೆ ಅನುಕೂಲವಾಗುತ್ತದೆ. ಆ ಪ್ರಯುಕ್ತ ನಾನು ಅವರಲ್ಲಿ ಕೇಳುತ್ತಿದ್ದೇನೆ. ಹೊಸ ಗಿಡಗಳನ್ನು ನೆಡುವುದರ ಮೂಲಕವಾಗಿ ಹುಲ್ಲನ್ನು ಅಲ್ಲಿ ಬೆಳೆಸಿದರೆ ರೈತರಿಗೆ ಅನುಕೂಲ ಆಗುತ್ತದೆ, ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ : ಮಾನ್ಯ ಅಧ್ಯಕ್ಷರೆ, ಬಹಳ ಮುಖ್ಯವಾದ ವಿಷಯವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆ ಭಾಗದ ಹೈನುಗಾರಿಕೆ ಮಾಡುವ ರೈತರಿಗೆ ಹುಲ್ಲನ್ನು

ಬೆಳೆಸಬೇಕೆಂದು ಹೇಳಿದ್ದಾರೆ. ಆ ಹುಲ್ಲನ್ನು ಬೆಳೆಸುವ ಕಾರ್ಯಕ್ರಮವನ್ನು ಅಲ್ಲಿ ಹಾಕಿಕೊಳ್ಳುತ್ತೇವೆ. ಮತ್ತೊಂದು ಸಲಹೆ ಏನು ಹೇಳಿದ್ದಾರೆಂದರೆ, ಮದ್ದಡ್ಕ ತೋಟಗಾರಿಕೆ ಇಲಾಖೆಯಲ್ಲಿ 115 ಎಕರೆ ಪ್ರದೇಶದಲ್ಲಿ ಬಹಳ ಹಳೆಯ ಗಿಡಗಳಿವೆ ಎಂದು. ಅವುಗಳನ್ನೆಲ್ಲಾ ತೆಗೆದು ಹಾಕಿ, ಹೊಸ ಗಿಡಗಳನ್ನು ನೆಟ್ಟರೆ ನಮ್ಮ farmಗೆ ಇನ್ನೂ ಹೆಚ್ಚು income ಬರುತ್ತದೆ. ಸಾಮಾನ್ಯ ಜನರು ನೋಡುವುದಕ್ಕೆ ಹೋದಾಗಲೂ ಸಹಿತ ನಾವು ಹೊಸ ತರಹದ ಬೆಳೆಗಳನ್ನು ಮಾಡುವಂಥ ನಿಟ್ಟಿನಲ್ಲಿ ಅವರಿಗೆ ಸೂಚನೆ ಹೋಗುತ್ತದೆ. ಆದ್ದರಿಂದ ಆ ರೀತಿ ಸಲಹೆ ಕೊಟ್ಟಿರುವ ಬಗ್ಗೆ ಕ್ರಮ ತೆಗೆದುಕೊಂಡು ಆ ಗಿಡಗಳನ್ನು ನೆಡುವಂಥ ಕಾರ್ಯಕ್ರಮವನ್ನು ಮಾಡುತ್ತೇವೆ.

ಶ್ರೀ ಕೆ. ಪ್ರಭಾಕರ ಬಂಗೇರ : ಪ್ರತಿ ಕ್ಷೇತ್ರದಲ್ಲಿ ಸಾವಯವ ಕ್ಷೇತ್ರಗಳನ್ನಾಗಿ ಮಾಡಲಿಕ್ಕೆ ಮತ್ತು ಎರೆಹುಳ ಗೊಬ್ಬರ ಘಟಕಗಳನ್ನು ನಿರ್ಮಾಣ ಮಾಡುತ್ತೇವೆಂದು ಹೇಳಿದ್ದಾರೆ. ಎಲ್ಲೆಲ್ಲಿ ಅವರುಗಳು ಮಾಡುತ್ತಾರೆ, ಅದರೊಟ್ಟಿಗೆ ಚಾರ್ಮಾಡಿಯಲ್ಲಿ ಕೂಡ 195 ಎಕರೆದ ಜಾಗವಿದೆ. ಆ ಜಾಗದಲ್ಲಿ ನಮ್ಮ ಬೆಳ್ತಂಗಡಿ ತಾಲ್ಲೂಕಿಗೆ ಮಾತ್ರವಲ್ಲ. ಬೇರೆ ತಾಲ್ಲೂಕುಗಳಿಗೆ ಕೂಡ ಕೊಡುವಂಥ ಸಸಿಗಳನ್ನು ಉತ್ಪಾದನೆ ಮಾಡಿಕೊಡುವಂಥದ್ದು ಸಾಧ್ಯವಿದೆ. ಅಲ್ಲಿಯೂ ಕೂಡ ಹೆಚ್ಚು ಉತ್ಪಾದನೆ ಬರುವ ರೀತಿಯಲ್ಲಿ ತೆಂಗಿನ ಗಿಡಗಳು, ಅಡಕೆ ಗಿಡಗಳು, ರಬ್ಬರ್ ಗಿಡಗಳನ್ನು ಮಾಡುವುದರ ಮೂಲಕವಾಗಿ ನರ್ಸರಿಗಳನ್ನು ಮಾಡಿದಾಗ ನಮ್ಮ ತಾಲ್ಲೂಕಿಗೆ ಅಲ್ಲದೇ ಹತ್ತಿರದ ತಾಲ್ಲೂಕುಗಳಿಗೆ ಕೂಡ ಅದರಿಂದ ಪ್ರಯೋಜನವಾಗುತ್ತದೆ. ಅದನ್ನು ಕೂಡ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಒತ್ತಾಯ ಮಾಡುತ್ತೇನೆ.

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ : ಮಾನ್ಯ ಅಧ್ಯಕ್ಷರೆ, ಕೃಷಿಯಲ್ಲಿ ಸಾವಯವ ಗೊಬ್ಬರದ ಬಗ್ಗೆ ಬಹಳಷ್ಟು ರೈತರಿಗೆ ಅರಿವು ಬಂದಿದೆ. ಈ ಮಳೆಯೊಳಗೆ ಎರೆಹುಳ ಗೊಬ್ಬರವನ್ನು ತಯಾರು ಮಾಡುವ ಘಟಕ ಪ್ರತಿ ತೋಟಗಾರಿಕೆ ಕ್ಷೇತ್ರದಲ್ಲಿ ನಾವು ಅದನ್ನು ಹಾಕಿಕೊಂಡಿದ್ದೇವೆ. ಅದರ ಜೊತೆಗೆ ಅವರು ಹೇಳಿದ ಹಾಗೆ ಮಾವು, ಕಾಳುಮೆಣಸು, ಗೇರು ಸಸಿ, ಸಪೋಟ ಜೊತೆಗೆ ತೆಂಗಿನ ಗಿಡವನ್ನು ಸಹ ಬೆಳೆಸಿ ರೈತರಿಗೆ ಕೊಡುವಂಥ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

ವಿಷಯ : ಸವದತ್ತಿಯಲ್ಲಿ ಬೀಜ ಸಂಸ್ಕರಣಾ ಘಟಕ ಪ್ರಾರಂಭಿಸುವುದು.

189 (1002) ಶ್ರೀ ಮಾಮನಿ ವಿಶ್ವನಾಥ ಕರಿಬಸಪ್ಪ (ಪರಸಗಡ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆ ಸವದತ್ತಿ ನಗರದಲ್ಲಿ ಬೀಜ ಸಂಸ್ಕರಣಾ ಘಟಕ ಪ್ರಾರಂಭಿಸುವ ಪ್ರಸ್ತಾವನೆಯನ್ನು 1998ರಲ್ಲಿ ಸಲ್ಲಿಸಿದ್ದು, ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ಘಟಕಕ್ಕೆ ಸವದತ್ತಿಯಲ್ಲಿ 12 ಗಂಟೆ ನಿವೇಶನವನ್ನು ಮಹಿಸಿಕೊಟ್ಟಿದ್ದರೂ ಬೀಜ ಸಂಸ್ಕರಣಾ ಘಟಕ ಮಂಜೂರಿ ವಿಳಂಬವಾಗಲು ಕಾರಣವೇನು;

ಇ) ಮಂಜೂರಾತಿಗಾಗಿ ಕೂಡಲೆ ಕ್ರಮ ಕೈಗೊಳ್ಳಲಾಗುವುದೇ?